# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 980 (1255) |
| ಸದಸ್ಯರ ಹೆಸರು: | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 29-12-2022 |
| ಉತ್ತರಿಸುವವರು: | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವೃಂದವಾರು ಎ ದರ್ಜೆಯಿಂದ ಹಿಡಿದು ಡಿ ದರ್ಜೆಯವರೆಗಿನ ಹುದ್ದೆಗಳ ವಿವರವಾದ ಮಾಹಿತಿ ಒದಗಿಸುವುದು) | ಅರಣ್ಯ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಮಂಜೂರಾದ ಹುದ್ದೆಗಳ ವಿವರ ಈ ಕೆಳಗಿನಂತಿದೆ: (ಕೆಳಗಿನ ಪಟ್ಟಿ ನೋಡಿ) |
| ಆ) | ರಾಜ್ಯದ ಮಲ್ಲೇಶ್ವರಂನಲ್ಲಿರುವ ಅರಣ್ಯ ಇಲಾಖೆಯ ಕಛೇರಿಯಲ್ಲಿ ಎ ದರ್ಜೆಯಿಂದ ಹಿಡಿದು 'ಡಿ' ದರ್ಜೆಯವರೆಗಿನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ ಎಷ್ಟು (ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದ ಮಲ್ಲೇಶ್ವರಂನಲ್ಲಿರುವ ಅರಣ್ಯ ಇಲಾಖೆಯ ಪ್ರಧಾನ ಕಛೇರಿಗಳಲ್ಲಿ (ಷರಾದಂತೆ) 'ಎ' ದರ್ಜೆಯಿಂದ ಹಿಡಿದು 'ಡಿ' ದರ್ಜೆಯವರೆಗಿನ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಹುದ್ದೆಗಳ ಸಂಖ್ಯೆ ಈ ಕೆಳಗಿನಂತಿದೆ. (ಕೆಳಗಿನ ಪಟ್ಟಿ ನೋಡಿ) |

ಅ) ಉತ್ತರದ ಪಟ್ಟಿ:

| ವೃಂದ | ಮಂಜೂರಾದ ಹುದ್ದೆಗಳು |
|---|---|
| ಗ್ರೂಪ್ – 'ಎ' | 511 |
| ಗ್ರೂಪ್ – 'ಬಿ' | 877 |
| ಗ್ರೂಪ್ – 'ಸಿ' | 10386 |
| ಗ್ರೂಪ್ – 'ಡಿ' | 3214 |
| ಒಟ್ಟು | 14988 |

ಆ) ಉತ್ತರದ ಪಟ್ಟಿ:

| ವೃಂದ | ಅಧಿಕಾರಿ/ ನೌಕರರ ಸಂಖ್ಯೆ |
|---|---|
| ಎ | 28* |
| ಬಿ | 23* |
| ಸಿ | 133 |
| ಡಿ | 31 |
| ಒಟ್ಟು | 215 |

*ಇತರ ಇಲಾಖೆಯಿಂದ ನಿಯೋಜನೆ ಮೇಲೆ ಮಂಜೂರಾದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಸೇರಿದಂತೆ

[ಷರಾ:- ಇಲಾಖೆಯ ಪ್ರಧಾನ ಕಛೇರಿಗಳಲ್ಲಿ ಇಲಾಖಾ ಮುಖ್ಯಸ್ಥರಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿ, ವನ್ಯಜೀವಿ ಘಟಕ ಕಛೇರಿ, ಅಭಿವೃದ್ಧಿ ಘಟಕದ ಕಛೇರಿ, ಕಾರ್ಯಯೋಜನೆ ಘಟಕದ ಕಛೇರಿ, ಜಾಗೃತ ಘಟಕದ ಕಛೇರಿ, ಸಾಮಾಜಿಕ ಅರಣ್ಯ ಮತ್ತು ಯೋಜನ ಘಟಕದ ಕಛೇರಿ, ಅರಣ್ಯ ಸಂಪನ್ಮೂಲ ನಿರ್ವಹಣೆ ಘಟಕದ ಕಛೇರಿ, ಇ.ಡಬ್ಲ್ಯೂ.ಪಿ.ಆರ್.ಟಿ&ಸಿ.ಸಿ ಕಛೇರಿ ಎಂಬ ರಾಜ್ಯ ಮಟ್ಟದ ಕಛೇರಿಗಳಲ್ಲದೆ, ಇಲಾಖೆಯ ಮಾಹಿತಿ ಸಂವಹನ ತಂತ್ರಜ್ಞಾನ ಕೇಂದ್ರವೂ ಸಹ ಸೇರಿರುತ್ತವೆ.]

<table>
<tr>
<td>ಇ)</td>
<td>ಹಾಗೆಯೇ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ ಎಷ್ಟು (ಜಿಲ್ಲಾವಾರು ಹುದ್ದೆವಾರು ಸಂಪೂರ್ಣ ಮಾಹಿತಿ ಒದಗಿಸುವುದು)</td>
<td>ರಾಜ್ಯದ ವಿವಿಧ ವೃತ್ತಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ ಈ ಕೆಳಗಿನಂತಿದೆ.
<table>
<tr><th rowspan="2">ಕ್ರ. ಸಂ.</th><th rowspan="2">ವೃತ್ತ</th><th colspan="4">ವೃಂದ</th><th rowspan="2">ಒಟ್ಟು</th></tr>
<tr><th>'ಎ'</th><th>'ಬಿ'</th><th>'ಸಿ'</th><th>'ಡಿ'</th></tr>
<tr><td>1</td><td>ಬೆಂಗಳೂರು ವೃತ್ತ</td><td>31</td><td>77</td><td>565</td><td>60</td><td>733</td></tr>
<tr><td>2</td><td>ಬಳ್ಳಾರಿ ವೃತ್ತ</td><td>28</td><td>72</td><td>421</td><td>79</td><td>600</td></tr>
<tr><td>3</td><td>ಬೆಳಗಾವಿ ವೃತ್ತ</td><td>12</td><td>76</td><td>698</td><td>72</td><td>858</td></tr>
<tr><td>4</td><td>ಚಾಮರಾಜನಗರ ವೃತ್ತ</td><td>14</td><td>25</td><td>266</td><td>65</td><td>370</td></tr>
<tr><td>5</td><td>ಚಿಕ್ಕಮಗಳೂರು ವೃತ್ತ</td><td>15</td><td>35</td><td>392</td><td>35</td><td>477</td></tr>
<tr><td>6</td><td>ಧಾರವಾಡ ವೃತ್ತ</td><td>17</td><td>49</td><td>310</td><td>52</td><td>428</td></tr>
<tr><td>7</td><td>ಹಾಸನ ವೃತ್ತ</td><td>14</td><td>42</td><td>308</td><td>28</td><td>392</td></tr>
<tr><td>8</td><td>ಕಲಬುರಗಿ ವೃತ್ತ</td><td>17</td><td>39</td><td>281</td><td>30</td><td>367</td></tr>
<tr><td>9</td><td>ಕೆನರಾ ವೃತ್ತ</td><td>30</td><td>75</td><td>980</td><td>63</td><td>1148</td></tr>
<tr><td>10</td><td>ಕೊಡಗು ವೃತ್ತ</td><td>12</td><td>24</td><td>308</td><td>37</td><td>381</td></tr>
<tr><td>11</td><td>ಮಂಗಳೂರು ವೃತ್ತ</td><td>15</td><td>43</td><td>416</td><td>23</td><td>497</td></tr>
<tr><td>12</td><td>ಮೈಸೂರು ವೃತ್ತ</td><td>16</td><td>68</td><td>551</td><td>126</td><td>761</td></tr>
<tr><td>13</td><td>ಶಿವಮೊಗ್ಗ ವೃತ್ತ</td><td>21</td><td>54</td><td>645</td><td>45</td><td>765</td></tr>
</table>
</td>
</tr>
<tr>
<td>ಈ)</td>
<td>ಈ ವೃಂದವಾರು ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು</td>
<td>ಈ ಮೇಲಿನ ವೃತ್ತಗಳಲ್ಲಿ ವೃಂದವಾರು ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಈ ಕೆಳಗಿನಂತಿದೆ.
<table>
<tr><th>ವೃಂದ</th><th>ಖಾಲಿ ಹುದ್ದೆಗಳು</th></tr>
<tr><td>ಗ್ರೂಪ್ 'ಎ'</td><td>107</td></tr>
<tr><td>ಗ್ರೂಪ್ 'ಬಿ'</td><td>100</td></tr>
<tr><td>ಗ್ರೂಪ್ 'ಸಿ'</td><td>3962</td></tr>
<tr><td>ಗ್ರೂಪ್ 'ಡಿ'</td><td>1861</td></tr>
<tr><td>ಒಟ್ಟು</td><td>6030</td></tr>
</table>
</td>
</tr>
<tr>
<td>ಉ)</td>
<td>ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಇದನ್ನು ಸಂರಕ್ಷಿಸಲು ಕೆಳಹಂತದ ಅರಣ್ಯ ರಕ್ಷಕರ ಹುದ್ದೆಗಳನ್ನು ಎಷ್ಟು ವರ್ಷಗಳಿಂದ ನೇಮಕ ಮಾಡಿಲ್ಲ (ವಿವರ ನೀಡುವುದು)</td>
<td>ಅರಣ್ಯ ಇಲಾಖೆಯಲ್ಲಿ ಖಾಲಿಇರುವ ಕೆಳ ಹಂತದ ಅರಣ್ಯ ರಕ್ಷಕರ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. ವಿವರ ಈ ಕೆಳಗಿನಂತಿದೆ.<br><br>ಇಲಾಖೆಯ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ-1/2019-20 ದಿನಾಂಕ: 02.03.2020ರಲ್ಲಿ 339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಿನಾಂಕ: 01.08.2022ರಿಂದ ರಾಜ್ಯದ ವಿವಿಧ ಅರಣ್ಯ ತರಬೇತಿ ಕೇಂದ್ರಗಳಲ್ಲಿ ವೃತ್ತಿ ಬುನಾದಿ ತರಬೇತಿಯನ್ನು ನೀಡಲಾಗುತ್ತಿದೆ.<br><br>ಮುಂದುವರೆದು, ಇನ್ನೂ 506 ಅರಣ್ಯ ರಕ್ಷಕರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದ್ದು, ಪ್ರಸ್ತುತ ಸುತ್ತೋಲೆ ಸಂಖ್ಯೆ: ಸಿಆಸುಇ 240 ಸೇನೆನಿ 2022, ದಿನಾಂಕ: 18-11-2022ರನ್ವಯ ಎಲ್ಲಾ ನೇರ ನೇಮಕಾತಿ ಪ್ರಕ್ರಿಯೆಯನ್ನು</td>
</tr>
</table>

| | | |
|---|---|---|
| | | ತಡೆಹಿಡಿಯಲು ಮತ್ತು ಮೀಸಲಾತಿ ಅನ್ವಯವಾಗುವ ವೃಂದಗಳಿಗೆ ನೀಡಲಾಗುವ ಮುಂಬಡ್ತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ಆಯೋಜಿಸಬಾರದೆಂದು ಸೂಚಿಸಲಾಗಿರುವುದರಿಂದ ತಾತ್ಕಾಲಿಕವಾಗಿ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ. |
| ಊ) | ಅರಣ್ಯ ಇಲಾಖೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಾಗೂ ಅನಗತ್ಯವಾಗಿ ಎ ದರ್ಜೆಯ ಹುದ್ದೆಗಳನ್ನೇ ನೇಮಕ ಮಾಡಿಕೊಂಡು ಅರಣ್ಯ ಸಂರಕ್ಷಣೆ ಮತ್ತು ನೈಸರ್ಗಿಕ ಸಂಪತ್ತಾದ ಅರಣ್ಯವನ್ನು ರಕ್ಷಿಸಲು ಕೆಳಹಂತದ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನು (ವಿವರ ನೀಡುವುದು) | ಅರಣ್ಯ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ನಿರ್ಧರಿಸಲಾಗುತ್ತಿದೆ. ಸದರಿ ವೃಂದ ಬಲವನ್ನು ಇಲಾಖೆಯಲ್ಲಿ ಅವಶ್ಯಕತೆಯನುಸಾರ ಕಾಲಕಾಲಕ್ಕೆ ಬದಲಾವಣೆ ಮಾಡಲಾಗುತ್ತಿದೆ. ಇಲಾಖೆಯಲ್ಲಿ ಕೆಳಹಂತದ (ವಿಶೇಷವಾಗಿ ಕ್ಷೇತ್ರ ಮಟ್ಟದಲ್ಲಿನ ಅರಣ್ಯ ವೀಕ್ಷಕ, ಅರಣ್ಯ ರಕ್ಷಕ, ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹಾಗೂ ವಲಯ ಅರಣ್ಯಾಧಿಕಾರಿ ವೃಂದ) ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. |
| ಋ) | ಒಂದು ಚಿಕ್ಕ ಚಿಕ್ಕ ವಲಯಕ್ಕೂ ಅರಣ್ಯ ಇಲಾಖೆಯಲ್ಲಿ ಅನಗತ್ಯ ಎ ದರ್ಜೆಯ ಅಧಿಕಾರಿ ಹುದ್ದೆಗಳನ್ನು ನೇಮಕ ಮಾಡಿರುವುದನ್ನು ಹಾಗೂ ಕೇಂದ್ರ ಕಛೇರಿಯಲ್ಲಿರುವ ಅನಗತ್ಯ ಎ ದರ್ಜೆ ಮತ್ತು ಇತರೆ ಅನಗತ್ಯ ಹುದ್ದೆಗಳನ್ನು ರದ್ದುಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? (ವಿವರ ನೀಡುವುದು) | ಅರಣ್ಯ ಇಲಾಖೆಯಲ್ಲಿ ವಲಯ ಮಟ್ಟದಲ್ಲಿ "ಎ" ದರ್ಜೆಯ ಅಧಿಕಾರಿ ಹುದ್ದೆಗಳು ಇರುವುದಿಲ್ಲ. ರಾಜ್ಯದಲ್ಲಿ ಕ್ಷೇತ್ರ ಮಟ್ಟದಲ್ಲಿರುವ 40 ಪ್ರಾದೇಶಿಕ ವಿಭಾಗಗಳು, 05 ರಾಷ್ಟ್ರೀಯ ಉದ್ಯಾನವನ ಹಾಗೂ 33 ವನ್ಯಜೀವಿ ಅಭಯಾರಣ್ಯಗಳು (5 ಹುಲಿ ಸಂರಕ್ಷಿತ ಪ್ರದೇಶಗಳು ಸೇರಿ) (430 ವಲಯಗಳು, 108 ಉಪ ವಿಭಾಗಗಳು, 1374 ಶಾಖೆಗಳು, 3344 ಗಸ್ತುಗಳು ಸೇರಿದಂತೆ), 09 ಅರಣ್ಯ ಸಂಚಾರಿ ದಳ ಘಟಕಗಳು, 06 ಕಾರ್ಯಯೋಜನೆ ಘಟಕಗಳು, 04 ಸಂಶೋಧನೆ ಘಟಕಗಳು, 01 ಕರ್ನಾಟಕ ರಾಜ್ಯ ಅರಣ್ಯ ಅಕಾಡೆಮಿ, 06 ಅರಣ್ಯ ತರಬೇತಿ ಕೇಂದ್ರಗಳು, 13 ಪ್ರಾದೇಶಿಕ ವೃತ್ತಗಳ ಆಡಳಿತ, ನಿಯಂತ್ರಣ, ನಿರ್ವಹಣೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಸುವ್ಯವಸ್ಥಿತವಾಗಿ ನಿರ್ವಹಿಸಲು ಇಲಾಖೆಯ ಕೇಂದ್ರ ಕಛೇರಿ ಸದೃಢ ರೀತಿಯಲ್ಲಿರುವುದು ಅಗತ್ಯವಿದೆ. |

**ಕಡತ ಸಂಖ್ಯೆ: ಅಪಜೀ 378 ಅಅಸೇ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ